# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ66 /2024

**ಪಿ.ಡಬ್ಲ್ಯೂಃ 4 (ಸಿಡಬ್ಲ್ಯೂಃ12 )**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ದುರ್ಗಮ್ಮ** |
| **ತಂದೆಯ ಹೆಸರು** | : | **ತಾಯಪ್ಪ** |
| **ವಯಸ್ಸು** | : | **17 ವರ್ಷ** |
| **ಕೆಲಸ** | : | **ವಿದ್ಯಾರ್ಥಿನಿ** |
| **ವಾಸ ಸ್ಥಳ** | : | **ಬಿಸಿಲಹಳ್ಳಿ ಗ್ರಾಮ** |

**ಸಾಕ್ಷಿಯನ್ನು ದಿನಾಂಕ 17.07.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 10 ನೇ ತರಗತಿ ಉತ್ತೀರ್ಣಳಾಗಿದ್ದೇನೆ.

**2.** ಪ್ರಕರಣದ ಪ್ರಾಸಾ1 ನನ್ನ ತಾಯಿ. ಚಾಸಾ.13 ನನ್ನ ಅಕ್ಕ. ಉಳಿಕೆ ಸಾಕ್ಷಿಗಳು ನನಗೆ ಪರಿಚಯ. ಮೃತ ತಾಯಪ್ಪ ನನ್ನ ತಂದೆ. ನಾವುಗಳು ಬಿಸಿಲಹಳ್ಳಿ ಗ್ರಾಮಸ್ತರು. ಆರೋಪಿತರು ಸಹ ಬಿಸಿಲಹಳ್ಳಿ ಗ್ರಾಮಸ್ತರು.

**3.** ಪ್ರಕರಣದ ಗಲಾಟೆ ಕುರಿತಂತೆ ನನಗೆ ಯಾವುದೇ ಮಾಹಿತಿ ಇಲ್ಲ. ನನ್ನ ತಂದೆಯನ್ನು ಯಾರು? ಹೇಗೆ ಕೊಲೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಆರೋಪಿತರ ವಿರುದ್ಧ ಹೇಳಿಕೆ ನೀಡಿಲ್ಲ. ನಾನು ಯಾವುದೇ ನ್ಯಾಯಾಧೀಶರ ಸಮಕ್ಷಮ ಹೇಳಿಕೆ ನೀಡಿಲ್ಲ.

**S.C.No.66 /2024**
**P.W. 4 (C.W.12 )**
**Date : 17.7.2026**

***(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿದ್ದು, ಕೋರಿಕೆ ಸಮರ್ಪಕವಾಗಿದ್ದು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ. )***

**ಪಾಟಿ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

**4.** ದಿಃ2.5.2024 ರ ರಾತ್ರಿ 8.30 ರ ಸಮಯದಲ್ಲಿ ನೀವುಗಳು ಬಿಸಿಲಹಳ್ಳಿಯ ನಿಮ್ಮ ಮನೆಯಲ್ಲಿದ್ದಾಗ ನ್ಯಾಯಾಲಯದಲ್ಲಿ ಹಾಜರು ಇರುವ ಎಲ್ಲಾ ಆರೋಪಿತರು ನಿಮ್ಮ ಮನೆಯ ಬಳಿ ಬಂದು ನಿಮ್ಮ ತಂದೆ ಆರೋಪಿತರ ವಿರುದ್ಧ ಖೋಟಾ ನೋಟು ವಿಚಾರದಲ್ಲಿ ಆರೋಪಿತರ ವಿರುದ್ಧ ಅಪಪ್ರಚಾರ ಮಾಡಿರುತ್ತಾರೆ ಎಂಬ ಕಾರಣಕ್ಕೆ ಜಗಳ ತೆಗೆದು ನಿಮ್ಮಗಳಿಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ.

**5.** ಸದರಿ ಸಮಯದಲ್ಲಿ 2 ನೇ ಆರೋಪಿ ನಿಮ್ಮ ತಂದೆಯನ್ನು ಹಿಡಿದುಕೊಂಡಿದ್ದು 1 ನೇ ಆರೋಪಿ ಚಾಕುವನ್ನು ಉಪಯೋಗಿಸಿ ನಿಮ್ಮ ತಂದೆಯ ಎದೆಯ ಭಾಗದಲ್ಲಿ ತಿವಿದು ತೀವ್ರ ಸ್ವರೂಪದ ರಕ್ತಗಾಯ ಮಾಡಿದ್ದರು ಎಂದರೆ ಸರಿಯಲ್ಲ. ಆರೋಪಿತರ ಪೈಕಿ ಇತರೆ ಆರೋಪಿತರು ತಮ್ಮ ಕೈಗಳಿಂದ ನಿಮಗೆಲ್ಲಾ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

6. ನಿಮ್ಮ ತಂದೆ ಯನ್ನು ಚಿಕಿತ್ಸೆಯ ಸಲುವಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾದರೆ ಮಾರ್ಗ ಮಧ್ಯದಲ್ಲಿ ನಿಮ್ಮ ತಂದೆ ಸೂಚಿಸಿದ ತೀವ್ರ ಸ್ವರೂಪದ ಗಾಯದಿಂದ ನಿಧನ ಹೊಂದಿದರು ಎಂದರೆ ಸರಿಯಲ್ಲ.

7. ನಂತರ ಪ್ರಾಸಾ.1 ರವರು ಆರೋಪಿತರ ವಿರುದ್ಧ ದೂರು ಫಿರ್ಯಾದು ಸಲ್ಲಿಸಿದರು ಎಂದರೆ ಸರಿಯಲ್ಲ. ಸೂಚಿಸಿದ ದೂರಿನ ನಂತರ ಪೊಲೀಸರು ನಿಮ್ಮನ್ನು ಮತ್ತು

**S.C.No.66 /2024**
**P.W. 4 (C.W.12 )**
**Date : 17.7.2026**

ಇತರರನ್ನು ವಿಚಾರಣೆಗೆ ಒಳಪಡಿಸಿದಾಗ ನೀವು ಈಗ ನಿಮಗೆ ಹೇಳಿದಂತೆ ಅಂದರೆ " ನಾನು ಮೇಲ್ಕಂಡ ವಿಳಾಸ ........ ದೂರು ನೀಡಿರುತ್ತಾಳೆ " ಎಂಬುದಾಗಿ ನಮೂದಿಸಿ ಹೇಳಿಕೆ ನೀಡಿರುವಿರಿ ಎಂದರೆ ಸರಿಯಲ್ಲ. ನನಗೆ ಓದಿ ಹೇಳಿದ ಭಾಗವನ್ನು **ನಿಪಿ.8** ಎಂದು ಈಗ ಗುರುತು ಮಾಡಲಾಯಿತು.

**8.** ದಿಃ29.5.2024 ರಂದು ನಾನು ನ್ಯಾಯಾಧೀಶರ ಮುಂದೆ ಹೇಳಿಕೆಯೊಂದನ್ನು ಅಂದರೆ ಪೊಲೀಸರು ಹೇಳಿಕೊಟ್ಟಂತೆ ನುಡಿದಿರುತ್ತೇನೆ. ನನಗೆ ಈಗ ಓದಿ ಹೇಳಿದ ಹೇಳಿಕೆಯನ್ನು **ನಿಪಿ.9** ಎಂದು ಈಗ ಗುರುತು ಮಾಡಲಾಯಿತು.

**9.** ಈಗ ನನಗೆ ತೋರಿಸಿದ ಮತ್ತು ಈಗಾಗಲೇ ಮುದ್ದೆಮಾಲು 3 ಎಂದು ಗುರುತು ಹಚ್ಚಿದ ಚಾಕುವಿನಿಂದ 1 ನೇ ಆರೋಪಿ ನಿಮ್ಮ ತಂದೆಯ ಎದೆಯ ಭಾಗಕ್ಕೆ ಚುಚ್ಚಿದ ಎಂದರೆ ಸರಿಯಲ್ಲ. ನಿಮ್ಮ ತಾಯಿ ಪ್ರಾಸಾ.1 ಈಗಾಗಲೇ ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿದ್ದು, ನಿಮ್ಮ ತಾಯಿಯ ಮಾತಿನ ಮುಲಾಜಿಗೆ ನೀವು ಅಸತ್ಯ ನುಡಿದಿರಿ ಎಂದರೆ ಸರಿಯಲ್ಲ.

## ಪಾಟೀಸವಾಲುಃ ಆರೋಪಿ ಪರ ವಕೀಲರಿಂದ:

ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**